ಆರ್‌ಬಿಐ / 2005 –06 / 196
ಡಿಬಿಓಡಿ. ಸಂಖ್ಯೆ .ಐಬಿಡಿ. ಬಿಸಿ.663 / 23.67.001 / 2005–06
ನವೆಂಬರ್,2, 2005

ಗೆ,

ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಅಧ್ಯಕ್ಷರು ಮತ್ತು
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
(ಆರ್ ಆರ್ ಬಿ ಗಳನ್ನು ಹೊರತುಪಡಿಸಿ)

ಮಾನ್ಯರೇ,

**ಚಿನ್ನದ ಆಭರಣಗಳು ಮತ್ತು ಒಡವೆಗಳ ಮೇಲೆ ಸಾಲಗಳು**

ಮೆಲ್ಕಂಡ ವಿಷಯದ ಬಗ್ಗೆ ದಿನಾಂಕ ನವೆಂಬರ್ 22, 1994 ರಂದು ಹೊರಡಿಸಿರುವ ನಮ್ಮ ಸುತ್ತೋಲೆ ಡಿಬಿಓಡಿ .ಸಂಖ್ಯೆ. ಬಿಪಿ. ಬಿಸಿ. 138 / 21.01.023 / 94 ನ್ನು ಹಾಗೂ ಸಿದ್ಧ ಪರಾಮರ್ಶೆಗಾಗಿ ಲಗತ್ತಿಸಿರುವ ಈ ಮುಂಚಿನ ಸುತ್ತೋಲೆಗಳನ್ನು ದಯವಿಟ್ಟು ನೋಡಿ.

2. ನಿಮಗೆ ತಿಳಿದಿರುವಂತೆ, ಚಿನ್ನದ ಆಭರಣಗಳ ಮೇಲೆ ಚೊಕ್ಕ ಮುದ್ರೆ ( ಊಚಿಟಟ ಒಚಿಡಿಞ) ಹಾಕುವುದು ಚಿನ್ನದ ಶುದ್ಧತೆಯ ಪರಿಮಾಣ, ಸೊಗಸುಗಾರಿಕೆ ಮತ್ತು ಪರಿಶುದ್ಧತೆಗೆ ಸಂಬಂಧಿಸಿದಂತೆ ಒಡವೆಗಳಲ್ಲಿ ಬಳಸಿದ ಚಿನ್ನದ ಗುಣಮಟ್ಟವನ್ನು ಖಾತ್ರಿ ಪಡಿಸುತ್ತದೆ. ಆದ್ದರಿಂದ ಬ್ಯಾಂಕುಗಳು ಅಂಥ ಚೊಕ್ಕ ಮುದ್ರೆ ಹಾಕಿದ ಒಡವೆಗಳ ಭದ್ರತೆಯ ಮೇಲೆ ಸಾಲಗಳನ್ನು ನೀಡುವುದು ಸುರಕ್ಷಿತ ಮತ್ತು ಸುಲಭ ಎಂದು ಭಾವಿಸುತ್ತವೆ. ಚೊಕ್ಕ ಮುದ್ರೆ ಹಾಕಿದ ಒಡವೆಗಳನ್ನು ಆದ್ಯತೆಯಲ್ಲಿ ಪರಿಗಣಿಸುವುದು ಚೊಕ್ಕ ಮುದ್ರೆ ಹಾಕುವ ಪದ್ದತಿಗೆ ಉತ್ತೇಜನ ನೀಡುವ ಸಾಧ್ಯತೆ ಇದ್ದು ಇದು ಗ್ರಾಹಕರ, ಸಾಲ ನೀಡುವವರ ಮತ್ತು ಕೈಗಾರಿಕೆಯ ದೀರ್ಘಾವಧಿ ಹಿತದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಾಗಿದೆ.

3. ಆದ್ದರಿಂದ, ಒಡವೆಗಳ ಮೇಲೆ ಸಾಲ ನೀಡುವ ಬಗ್ಗೆ ಬ್ಯಾಂಕುಗಳು ಪರಿಗಣಿಸುವಾಗ, ಚೊಕ್ಕ ಮುದ್ರೆ ಹಾಕಿರುವ ಒಡವೆಗಳ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ಹಣದ ಮೊತ್ತವನ್ನು ಮತ್ತು ಅದರ ಮೆಲಿನ ಬಡ್ಡಿ ದರವನ್ನು ನಿರ್ಧರಿಸಬೇಕು.

4. ಚಿನ್ನದ ಆಭರಣಗಳು ಮತ್ತು ಒಡವೆಗಳ ಮೇಲೆ ಸಾಲಗಳನ್ನು ನೀಡುವುದಕ್ಕೆ ಸಂಬಂಧಿಸಿದ ಇತರ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ತಮ್ಮ ವಿಶ್ವಾಸಿ,**
**( ಪಿ. ಸರಣ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**